ಅರಸೀಕೆರೆ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯದಲ್ಲಿ

ಸಿ.ಸಿ. ನಂ: **260/20**

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಂಜು ಡಿ.ಎಸ್. | ಸಿ.ಡಬ್ಲ್ಯೂ- | 5 |
| ತಂದೆ/ಗಂಡನ ಹೆಸರು | ಸಣ್ಣಪ್ಪ | ಪಿ.ಡಬ್ಲ್ಯೂ | 3 |
| ವಯಸ್ಸು | 54 ವರ್ಷ | ಪ್ರಮಾಣ ವಚನ ಭೋಧಿಸಿದ ದಿನಾಂಕ | |
| ವೃತ್ತಿ | ಕೇಬಲ್ ಆಪರೇಟರ್ | | |
| ವಾಸ | ಮಲ್ಲೇಶ್ವರ ನಗರ, ಅರಸೀಕೆರೆ | 08.01.2026 | |

ಮುಖ್ಯ ವಿಚಾರಣೆ ಸಸಅ ರವರಿಂದ:-

**2020** ನೇ ಇಸವಿಯಲ್ಲಿ ಅರಸೀಕೆರೆಯ ಸುಬ್ರಹ್ಮಣ್ಯ ನಗರದ ಸಾಯಿ ಸರ್ಕಲ್ ನಲ್ಲಿ ಜಗಳ ಆಗಿದೆ ಮಹಜರ್ ಗೆ ಸಹಿ ಮಾಡಲು ಪೋಲೀಸರು ಕೇಳಿದ್ದರಿಂದ ನಾನು ಅಲ್ಲಿಗೆ ಹೋಗಿ ಅಲ್ಲಿ ಸಹಿ ಹಾಕಿರುತ್ತೇನೆ. ಆ ಸಮಯದಲ್ಲಿ ಚಾಸಾ-**6, 7** ರವರು ಹಾಜರಿದ್ದರು. ಆ ಜಗಳ ಮಧುಸೂದನ ಮತ್ತು ಗೀತಾ ರವರ ನಡುವೆ ಆಗಿದೆ ಎಂದು ಪೋಲೀಸರು ಹೇಳಿದರು. ಮಹಜರ್ ಮಾಡಿದಾಗ ಬೆಳಗ್ಗೆ **9-30** ರಿಂದ **10-00** ಗಂಟೆ ಸಮಯ ಆಗಿತ್ತು. ಆ ಸಮಯದಲ್ಲಿ **2** ಫೋಟೋಗಳನ್ನು ತೆಗೆದಿರುತ್ತಾರೆ. ಮಹಜರ್ ನ್ನು ನಿಪಿ-**2** ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿಯ ಸಹಿಯನ್ನು ನಿಪಿ-**2**(ಬಿ) ಎಂದು ಗುರುತಿಸಲಾಯಿತು. ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-**3** ಹಾಗೂ **4** ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಶ್ರೀ ಎಸ್.ಪಿ. ವಕೀಲರಿಂದ:-

ಮಹಜರ್ ನಲ್ಲಿ ಬರೆದಿರುವ ವಿಷಯ ಓದಿ ಹೇಳಲಿಲ್ಲ. ಪೋಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಮಹಜರ್ ಗೆ ಬರುವಂತೆ ಪೋಲೀಸರು ನನಗೆ ನೋಟೀಸು ಕೊಟ್ಟಿಲ್ಲ. ಚಾಸಾ-**1** ನನಗೆ ಪರಿಚಯಸ್ಥರು. ಆ ಕಾರಣದಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಅರಸೀಕೆರೆ.ದಿ: **08-01-2026.**